# ಮಂಗಳ ಗ್ರಹದಲ್ಲಿ ಪುಟ್ಟಿ

ಮೌಲ್ಯ :-" ಕನಸುಗಳನ್ನು ಕಾಣಬೇಕು ಅವುಗಳನ್ನು ನನಸು ಮಾಡಬೇಕು"

## ಪದಗಳ ಅರ್ಥ

1.ಆಗಸ. - ಆಕಾಶ
2.ಇಷ್ಟ. - ಇಚ್ಚೆ
3. ರೆಕ್ಕೆ. - ಹಕ್ಕಿಗಳ ಪುಕ್ಕ
4. ಒಡಲು. - ಶರೀರ
5.ಸಾಗು. - ಚಲಿಸು
6.ಉಡಿ. - ಮಡಿಲು
7.ಧರೆ. - ಭೂಮಿ
8.ಹೆಬ್ಬಂಡೆ. - ದೊಡ್ಡದಾದ ಬಂಡೆ
9.ಬರ. - ಬರಗಾಲ
10. ಅಳಿ. - ಸಾಯು

---

## ಕವಿ ಕೃತಿ ಪರಿಚಯ

ಕವಿ. :- ಸಿ, ಎಂ, ಗೋವಿಂದರೆಡ್ಡಿ
ಜನನ. :- ೧೧ - ೦೮ - ೧೯೫೮
ಜನ್ಮ ಸ್ಥಳ :- ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ
. ಚೆನ್ನಿಗರಾಯಪುರ.
ಕೃತಿಗಳು. :- ಬಣ್ಣದ ಚಿಟ್ಟೆ, ಮಕ್ಕಳ ಮಂದಾರ, ಪದ್ಯ. ಹೇಳುವ ಮರ
ಪ್ರಶಸ್ತಿಗಳು. :- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

---

## ಅಭ್ಯಾಸಗಳು

ಅ. ಬಿಟ್ಟ ಸ್ಥಳ ತುಂಬಿರಿ.

೧.ಒಂದಿನ ಇದ್ದಕ್ಕಿದಂತೆ ಪುಟ್ಟಿಗೆ ರೆಕ್ಕೆ ಬಂದಿತ್ತು.

---

೨.ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ಮಡಿಲು ಸೇರಿದಳು.

---

೩.ಪುಟ್ಟಿಯೇ ನಮ್ಮೀ ಮಂಗಳಗ್ರಹದ ದುರಂತ ಕಥೆಯನ್ನು ಕೇಳಿ ತಿಳಿ.

---

೪.ಹಸಿರನು ಅಳಿಸದೆ ಗಿಡಮರ ಬೆಳೆಸಿ ಉಳಿಸುವೆವೆಂದಳು ಈ ಧರೆಯ.

---

ಆ.ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧.ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

ಉ: ಪುಟ್ಟಿಗೆ ಹಕ್ಕಿಯ ಹಾಗೆ ಹಾರುವ ಮನಸ್ಸಿತ್ತು.

---

೨.ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

ಉ: ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಮಂಗಳನಂಗಳಕ್ಕೆ ಸೇರಿದಳು.

---

೩.ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

ಉ: ಪುಟ್ಟಿ ಯೋಗಿಗೆ "ನೀನು ಹೇಗೆ ಇಲ್ಲಿಗೆ ಬಂದೆ ?" ಎಂದು ಕೇಳಿದಳು.

---

೪.ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು ?

ಉ : ಆಗಿನ ಜನತೆಯು ನಾಡನು ಕಟ್ಟಲು,
ಮರಗಳನ್ನು ಕಡಿದು ಹಾಕಿದರು ಇದರಿಂದಾಗಿ
ಬರ ಬಂದಿತು.

---

೫.ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?
ಉ: ಪುಟ್ಟಿ ಜನರಲ್ಲಿ ಹಸಿರನ್ನು ಉಳಿಸಲು ಬೇಡಿದಳು.

---

ಇ. ಪದ್ಯ ಭಾಗವನ್ನು ಪೂರ್ಣಗೊಳಿಸಿರಿ.
ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ

---

೨.ಮಳೆ ಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
ನಿಮ್ಮ ಭೂಮಿಯಲ್ಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ.

---

ಉ. ನಾಮಪದ, ನಾಮಪ್ರಕೃತಿ ಮತ್ತು ವಿಭಕ್ತಿ ಪ್ರತ್ಯಯಗಳು
ಗುರುತಿಸಿ ಬರೆಯಿರಿ.
೧. ಗಗನ + ಅನ್ನು = ಗಗನವನ್ನು
ನಾಮಪ್ರಕೃತಿ + ದ್ವಿತಿಯಾ ವಿಭಕ್ತಿ= ನಾಮಪದ
೨. ಶಾಲೆ + ಇಂದ = ಶಾಲೆಯಿಂದ
ನಾಮಪ್ರಕೃತಿ + ತೃತಿಯಾ ವಿಭಕ್ತಿ= ನಾಮಪದ
ಊ. ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ (ವಿಶೇಷಣ)ಗಳನ್ನು
ಗುರುತಿಸಿರಿ.

ಉದಾ: ವಿವೇಕನಿಗೆ ಅಪಾರ ಬುದ್ಧಿವಂತಿಕೆಯಿದೆ.- ಅಪಾರ

೧. ರಫೀಕನದು ದೊಡ್ಡಮನೆ ದೊಡ್ಡ

೨. ಅವಳಿಗೆ ಹಸಿರು ಬಣ್ಣ ಇಷ್ಟ ಹಸಿರು.

೩. ಪುಟ್ಟಿಯು ಕಂಡಳು ಕೆಂಪು ಬಂಡೆಯನು. ಕೆಂಪು

---

ಋ. ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ.

೧. ಡೇವಿಡ್ ನ ಊರಿನಲ್ಲಿ ನೂರು ಹಸುಗಳಿವೆ ನೂರು.

೨. ಪೂರ್ಣ ಚಂದ್ರನು ಬೆಳಿಗ್ಗೆ ಐದು ಗಂಟೆಗೆ  ಏಳುತ್ತಾನೆ ಐದು.

೩. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು ಒಂದು

---

ಉಕ್ತಲೇಖನ

೧. ಪುಟಾಣಿ

೨. ಕಷ್ಟ

೩. ಪುಟ್ಟಿ

೪. ಚಂದ್ರ

೫. ಧರೆ

೬. ಯೋಗಿ

೭. ಜೀವಜಲ

೮. ಪೊದೆ

೯. ಪಕ್ಷಿ

೧೦. ರೆಕ್ಕೆ